UASB Library
Newspaper Clippings
Wednesday 25-05-2022 Pg .1
Jai Kisan

ಗಗನಕ್ಕೇರುತ್ತಿರುವ ಆಹಾರ ವಸ್ತುಗಳ ಬೆಲೆ ತಗ್ಗಿಸಲು ಕೇಂದ್ರ ಸರಕಾರದ ಕಸರತ್ತು

ಹಣದುಬ್ಬರ ತಡೆಗೆ ಸಕ್ಕರೆ ರಫ್ತಿಗೆ ನಿರ್ಬಂಧ?

■ **ಎಕನಾಮಿಕ್ ಟೈಮ್ಸ್** ಹೊಸದಿಲ್ಲಿ

ದೇಶದಲ್ಲಿ ಆಹಾರ ವಸ್ತುಗಳ ಬೆಲೆಗಳು ಗಗನಕ್ಕೇರಿರುವ ಹಿನ್ನೆಲೆಯಲ್ಲಿ ಕಳೆದ ಆರು ವರ್ಷಗಳಲ್ಲೇ ಇದೇ ಮೊದಲ ಬಾರಿಗೆ, ಕೇಂದ್ರ ಸರಕಾರವು ಸಕ್ಕರೆ ರಫ್ತುಗಳನ್ನು ನಿರ್ಬಂಧಿಸಲು ಚಿಂತನೆ ನಡೆಸಿದೆ ಎಂದು ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಪ್ರಸಕ್ತ ಋತುವಿನಲ್ಲಿ ಸರಕಾರವು ಸಕ್ಕರೆ ರಫ್ತಿನ ಮೇಲೆ ನಿಗಾ ಇಡಲು ಉದ್ದೇಶಿಸಿದ್ದು, ರಫ್ತು 1 ಕೋಟಿ ಟನ್‌ಗಳ ಮಿತಿ ದಾಟದಂತೆ ನೋಡಿಕೊಳ್ಳಲು ಉದ್ದೇಶಿಸಿದೆ. ''ಈ ತನಕ ಕೇವಲ 72 ಲಕ್ಷ ಟನ್ ಸಕ್ಕರೆಯನ್ನು ಮಾತ್ರ ದೇಶದಿಂದ ರಫ್ತು ಮಾಡಲಾಗಿದೆ. ಒಮ್ಮೆ ಮಳೆಗಾಲ ಬರುತ್ತಿದ್ದಂತೆಯೇ ರಫ್ತು ವಹಿವಾಟು ಕಡಿಮೆಯಾಗುತ್ತದೆ. 1 ಕೋಟಿ ಟನ್ ರಫ್ತು ಗುರಿ ಇನ್ನೂ ಬಹಳ ದೂರದಲ್ಲಿದೆ,'' ಎಂದು ಶ್ರೀ ರೇಣುಕಾ ಶುಗರ್ಸ್‌ನ ಅತುಲ್ ಚತುರ್ವೇದಿ ವಿಜಯ ಕರ್ನಾಟಕದ ಸೋದರ ಚಾನೆಲ್ 'ಇಟಿ ನೌ'ಗೆ ತಿಳಿಸಿದ್ದಾರೆ.

ಭಾರತವು ವಿಶ್ವದ ಅತಿದೊಡ್ಡ ಸಕ್ಕರೆ ಉತ್ಪಾದಕ ದೇಶವಾಗಿದ್ದು, ರಫ್ತಿನಲ್ಲಿ 2ನೇ ಸ್ಥಾನದಲ್ಲಿದೆ. ಬ್ರೆಜಿಲ್ ಮೊದಲ ಸ್ಥಾನದಲ್ಲಿದೆ.



ಸುದ್ದಿ ಬೆನ್ನಲ್ಲಿ ಷೇರುಗಳು 5% ನಷ್ಟ

ಸಕ್ಕರೆ ರಫ್ತಿಗೆ ನಿರ್ಬಂಧ ಸಂಭವ ಎನ್ನುವ ಸುದ್ದಿ ಹೊರ ಬಿದ್ದ ಬೆನ್ನಲ್ಲೇ ಷೇರು ಪೇಟೆಯಲ್ಲಿ ಮಂಗಳವಾರ ಸಕ್ಕರೆ ಕಂಪನಿಗಳ ಷೇರುಗಳು ಶೇ.5ಕ್ಕಿಂತ ಹೆಚ್ಚು ಕುಸಿತ ಕಂಡಿವೆ.

ದರ ಇಳಿಕೆಗೆ ಹರಸಾಹಸ

- ಉಕ್ರೇನ್‌ನ ಮೇಲೆ ರಷ್ಯಾ ಆಕ್ರಮಣ ಮಾಡಿದ ನಂತರ ಜಗತ್ತಿನೆಲ್ಲೆಡೆ ಆಹಾರ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದು ಪ್ರಪಂಚದಾದ್ಯಂತ ಸರಕಾರಗಳು ಕೆಲವು ಸರಕುಗಳ ದೇಶೀಯ ಬೆಲೆಗಳನ್ನು ಇಳಿಕೆ ಮಾಡಲು ಹರಸಾಹಸ ಪಡುತ್ತಿವೆ.
- ಮಲೇಷ್ಯಾ ಜೂನ್ 1ರಿಂದ ತಿಂಗಳಿಗೆ 36 ಲಕ್ಷ ಕೋಳಿಗಳ ರಫ್ತನ್ನು ನಿಲ್ಲಿಸಲಿದೆ. ಇತ್ತೀಚೆಗೆ ಇಂಡೋನೇಷ್ಯಾ ತಾಳೆ ಎಣ್ಣೆ ರಫ್ತನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತ್ತು.
- ಭಾರತವು ಗೋಧಿ ರಫ್ತುಗಳನ್ನು ನಿರ್ಬಂಧಿಸಿದ್ದರೆ, ಸರ್ಬಿಯಾ ಮತ್ತು ಕಝಾಕಿಸ್ತಾನ್ ಗೋಧಿಯ ರಫ್ತಿಗೆ ಮಿತಿ ನಿಗದಿಪಡಿಸಿದೆ.
- ಇಂಡೋನೇಷ್ಯಾ ಏಪ್ರಿಲ್ 28ರಂದು ತಾಳೆ ಎಣ್ಣೆಯ ರಫ್ತನ್ನು ನಿಲ್ಲಿಸಿತ್ತು. ಈಗ ಸೋಮವಾರದಿಂದ ಮತ್ತೆ ರಫ್ತಿಗೆ ಅವಕಾಶ ಕಲ್ಪಿಸಿದೆ. ಹೀಗಾಗಿ ಭಾರತದಲ್ಲೂ ಬೆಲೆ ಇಳಿಕೆಯಾಗುವ ಸಾಧ್ಯತೆ ಇದೆ.

- 6 ವರ್ಷಗಳಲ್ಲೇ ಮೊದಲಗೆ ಸಕ್ಕರೆ ರಫ್ತಿನ ಮೇಲೆ ನಿರ್ಬಂಧ ವಿಧಿಸಲು ಸರಕಾರ ಚಿಂತನೆ
- ಕೇಂದ್ರದ ಚಿಂತನೆ ಕಾರ್ಯರೂಪಕ್ಕೆ ಬಂದರೆ ಕಬ್ಬು ಬೆಳೆಗಾರರಿಗೆ ಕಹಿ
- ಸಕ್ಕರೆ ದರ ಇಳಿಕೆಯಾಗಿ ಕಬ್ಬು ಬೆಳೆಗಾರರಿಗೆ ಕಡಿಮೆ ದರ ಸಿಗುವ ಸಾಧ್ಯತೆ

ಗ್ರಾಹಕರಿಗೆ ಸಿಹಿ, ಕಬ್ಬು ಬೆಳೆಗಾರರಿಗೆ ಕಹಿ

ರಫ್ತು ನಿಷೇಧ ಅಥವಾ ರಫ್ತಿಗೆ ನಿರ್ಬಂಧ ಹೇರಿದರೆ ದೇಶೀಯ ಮಟ್ಟದಲ್ಲಿ ಸಕ್ಕರೆ ಬೆಲೆ ಒಂದಿಷ್ಟು ಇಳಿಕೆಯಾಗಲಿದೆ. ಇದರಿಂದ ಕಬ್ಬು ಬೆಳೆಗಾರರಿಗೆ ಕಡಿಮೆ ದರ ಸಿಗುವ ಸಾಧ್ಯತೆಯೂ ಇದೆ. ಸಕ್ಕರೆ ಬೆಲೆ ಇಳಿಕೆ ಗ್ರಾಹಕರ ಪಾಲಿಗೆ ಶುಭ ಸುದ್ದಿಯಾದರೂ, ಬೆಳೆಗಾರರಿಗೆ ಒಂದಿಷ್ಟು ಕಹಿಯಾಗುವ ಲಕ್ಷಣಗಳಿವೆ.

ತಗ್ಗಲಿದೆ ಸೋಯಾಬೀನ್ ಸೂರ್ಯಕಾಂತಿ ಎಣ್ಣೆ ದರ



ಆಹಾರ ಪದಾರ್ಥಗಳ ದರ ಇಳಿಸುವ ನಿಟ್ಟಿನಲ್ಲಿ ಸೋಯಾಬೀನ್ ಮತ್ತು ಸೂರ್ಯಕಾಂತಿ ಎಣ್ಣೆಗಳ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸಲು ಕೇಂದ್ರ ಸರಕಾರ ಮುಂದಾಗಿದೆ. ಈ ಪರಿಣಾಮ ಖಾದ್ಯ ತೈಲಗಳ ದರ ತಗ್ಗಲಿದೆ. ಕೃಷಿ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ಪ್ರಸ್ತುತ ಶೇ.5ರಷ್ಟಿದ್ದು, ಅದನ್ನು ಸಂಪೂರ್ಣ ತೆಗೆದು ಹಾಕಲು ಸರಕಾರ ಸಜ್ಜಾಗಿದೆ. ಈ ವಾರದೊಳಗೆ ಅಂತಿಮ ತೀರ್ಮಾನ ಹೊರಬೀಳಲಿದೆ ಎಂದು ಮೂಲಗಳು ಹೇಳಿವೆ. ಕೇಂದ್ರ ಸರಕಾರವು ಈಗಾಗಲೇ ತಾಳೆ ಎಣ್ಣೆ ಮತ್ತು ಸೋಯಾಬೀನ್ ಸೇರಿದಂತೆ ಖಾದ್ಯ ತೈಲಗಳ ಮೇಲಿನ ಮೂಲ ಆಮದು ಸುಂಕಗಳನ್ನು ತೆರವುಗೊಳಿಸಿದೆ.

25-05-2022
Vk Pg 05

ರೈತ ಉತ್ಪಾದಕ ಸಂಸ್ಥೆಗಳಿಗೆ ಏಕರೂಪ ಬ್ರಾಂಡ್

ರಾಜ್ಯ ಸರಕಾರದ ನಿರ್ಧಾರ | ಲೋಗೋ, ಬ್ರಾಂಡ್ ಹೆಸರಿಗೆ ಅರ್ಜಿ ಆಹ್ವಾನ

■ **ವಿಜಯ್ ಕೋಟ್ಯಾನ್** ಮಂಗಳೂರು
vijaya.poojary@timesgroup.com

ರಾಜ್ಯದ ರೈತ ಉತ್ಪಾದಕ ಸಂಸ್ಥೆಗಳನ್ನು ಒಟ್ಟಾಗಿ ಸೇರಿಸಿ ಒಂದು ಏಕೀಕೃತ ಬ್ರಾಂಡ್ ಪ್ರಾರಂಭಿಸಲು ರಾಜ್ಯ ಸರಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ಈ ರೈತ ಉತ್ಪಾದಕ ಅಡಿಯಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಪ್ರಚಾರ ಮತ್ತು ಮಾರಾಟ ಮಾಡಲು ಅವಕಾಶ ನೀಡಲಾಗಿದೆ. ಆದರೆ ರಾಜ್ಯಮಟ್ಟದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಬ್ರಾಂಡ್‌ಗೆ ಸ್ಪರ್ಧೆ ನೀಡುವ ದೃಷ್ಟಿಯಿಂದ ಒಂದೇ ಬ್ರಾಂಡ್ ನಡಿ ತರಲು ಸರಕಾರ ನಿರ್ಧರಿಸಿದೆ. ಒಂದೇ ಬ್ರಾಂಡ್‌ನಿಂದ ಸ್ಪರ್ಧಾತ್ಮಕತೆ ಹೆಚ್ಚಿಸಲು ಸಾಧ್ಯವಿದೆ.

ಮೊದಲ ಹಂತದಲ್ಲಿ ರೈತರು ಬ್ರಾಂಡ್ ಹೆಸರಿನಲ್ಲಿ ಬೇಳೆಕಾಳುಗಳು, ರಾಗಿ, ಬೆಲ್ಲ, ಜೇನುತುಪ್ಪ, ಮೆಣಸಿನಕಾಯಿ, ಮಸಾಲೆಗಳು, ಗೋಡಂಬಿ ಮತ್ತು ಒಣದ್ರಾಕ್ಷಿಗಳಂಥ ಕೊಳೆಯದ ಉತ್ಪನ್ನಗಳ ಶ್ರೇಣಿಯನ್ನು ಬಿಡುಗಡೆ ಮಾಡಲಾಗುತ್ತದೆ. ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ಮತ್ತಷ್ಟು ಉತ್ಪನ್ನಗಳನ್ನು ಸೇರಿಸಲು ಉದ್ದೇಶಿಸಲಾಗಿದೆ ಎಂದು ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರು ತಿಳಿಸಿದ್ದಾರೆ.



ರಾಜ್ಯಾದ್ಯಂತ ರೈತ ಉತ್ಪಾದಕ ಸಂಸ್ಥೆಗಳ ಉತ್ಪನ್ನಗಳನ್ನು ಏಕೀಕೃತ ಬ್ರಾಂಡ್, ಟ್ಯಾಗ್‌ಲೈನ್, ಲೋಗೋ ಮಾಡಲು ರಾಜ್ಯ ಸರಕಾರ ನಿರ್ಧರಿಸಿದೆ. ಈ ಬ್ರಾಂಡ್ ಲೋಗೋ, ಹೆಸರು ಸೂಚಿಸಲು ಜೂ.11ಕೊನೆಯ ದಿನಾಂಕ.

-ಕೆ. ಪ್ರವೀಣ್ ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕಾ ಇಲಾಖೆ

ಬ್ರಾಂಡ್, ಲೋಗೋಗೆ ಆಹ್ವಾನ: ರಾಜ್ಯಾದ್ಯಂತ ರೈತ ಉತ್ಪಾದಕ ಸಂಸ್ಥೆಗಳ ಉತ್ಪನ್ನಗಳನ್ನು ಒಂದೇ ಬ್ರಾಂಡ್‌ನಡಿ ತರುವ ಉದ್ದೇಶದಿಂದ ಬ್ರಾಂಡ್ ಹೆಸರು, ಲೋಗೋಗಳನ್ನು ಆಹ್ವಾನಿಸಲಾಗಿದೆ. ಹೆಸರು, ವಿಶಿಷ್ಟತೆ ಮತ್ತು ಲೋಗೋ ಮತ್ತು ಟ್ಯಾಗ್‌ಲೈನ್‌ಗಳ ಸೃಜನಾತ್ಮಕತೆಯನ್ನು ಆಧರಿಸಿ ವಿಜೇತರ ಆಯ್ಕೆ ನಡೆಯಲಿದೆ. ಮೇ 8ರಿಂದ ಜೂ.11ರೊಳಗೆ ಸಲ್ಲಿಸಬಹುದಾಗಿದೆ.

ಬಹುಮಾನಗಳು: ಅತ್ಯುತ್ತಮ ಬ್ರಾಂಡ್, ವಿಶಿಷ್ಟ ಟ್ಯಾಗ್‌ಲೈನ್ ಮತ್ತು ಆಕರ್ಷಕವಾದ ಲೋಗೋಗಳಿಗೆ ಪ್ರಥಮ 75 ಸಾವಿರ ರೂ., ದ್ವಿತೀಯ 50 ಸಾವಿರ ರೂ., ತೃತೀಯ ಬಹುಮಾನ 25 ಸಾವಿರ ರೂ. ಬಹುಮಾನ ನಿಗದಿಗೊಳಿಸಲಾಗಿದೆ. ಇದನ್ನು ಹೊರತುಪಡಿಸಿದ ಅತ್ಯುತ್ತಮ ಬ್ರಾಂಡ್, ಹೆಸರು, ಲೋಗೋ ಮತ್ತು ವಿಶಿಷ್ಟ ಅಡಿಬರಹಗಳಿಗೆ ಟ್ರೋಫಿ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿರುತ್ತದೆ ಎಂದು ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

25-05-2022
Vk Pg 16

Money spider, ant-mimicking species spotted at Wayanad

Findings by researchers of Christ College, Irinjalakuda

MINI MURINGATHERI
THRISSUR

Money spiders, commonly found in European meadows, have been reported for the first time in the country from the Muthanga range of the Wayanad Wildlife Sanctuary.

The species is called so as it is "believed to bring luck" to the person who comes in contact with it.



Male of the money spider (*Prosoponoides biflectogynus*), and, right female of the ant-mimicking spider (*Toxeus alboclavus*).

'Six species'

Researchers of Christ College, Irinjalakuda, Thrissur, have discovered the spider that belongs to the family of dwarf spiders (*Linyphiidae*) under the genus *Prosoponoides*. It has been given the name *Prosoponoides biflectogynus*.

"Only six species of spiders belonging to this genus have been identified from across the world so far. It is the first report of this genus from India and hence no extensive studies have been conducted on this species of spiders in the country," said Dr. Sudhikumar A.V., Head, Department of Zoology, Christ College.

The research team includes Athira Jose and Vishnu Haridas, research scholars of the Centre for Animal Taxonomy and Ecology (CATE), Christ College.

They have also discovered ant-mimicking spiders, belonging to the group of jumping spiders, from the Mananthavady range. They belong to the family of *Salticidae*.

The male and the female money spiders are typically 3 mm and 4 mm long respectively. Both sexes are dark brown and have irregular silver patches and black spots on elliptical abdomen. There are numerous fine black spines on their olive green legs. Eight dark eyes are arranged in two rows.

Females build triangular webs in between dry tree twigs and feed on small insects, while males prefer to hide beneath dry leaves. Two or more male spiders can be found in the web of a single female. The ant-mimicking spider has been named *Toxeus alboclavus*. Researchers collected this species of jumping spiders from among leaf litters.

Mimic ants

"They perfectly mimic ants by lifting their front pair of legs while walking as a mechanism to escape from potential predators. Only three species of this genus have been reported from India, and this is the first species reported from the Western Ghats," noted Dr. Sudhikumar.

The male and the female spiders of this species grow up to 4 mm and 6 mm long respectively.

The study was funded by the Department of Science and Technology (DST) and the University Grants Commission (UGC). The findings were published in the British scientific journals *Peckhamia* and *Arachnology*.

25-05-2022 Hindu Pg 07

25-05-2022 Hindu Pg 10

Centre scraps import duties on crude sunflower, soyabean oils

Bid to tame inflation; after wheat, export of sugar restricted to 10 million tonnes

SPECIAL CORRESPONDENT
NEW DELHI

In a bid to cool inflation in edible oils, the Centre on Tuesday allowed duty-free import of 20 lakh tonnes each of crude soyabean oil and crude sunflower oil for this year as well as 2023-24.

Retail inflation in edible oils and fats was 18.8% in March and 17.3% in April, and sunflower oil imports have been constricted due to the ongoing Russia-Ukraine conflict since February 24.

The Finance Ministry has notified the duty structure changes which will become operational from May 25, stating that this would provide significant relief to consumers.



Burning issue: Prices of edible oils have been ruling high, stoking the retail inflation rate. ▪ REUTERS

Ukraine was the world's largest sunflower oil exporter before the conflict began and India has been striving to tap alternative supplies from rival Russia and countries such as Argentina.

Last October, the government reduced the basic import duties on edible oils amid runaway prices.

The import duty on crude palm oil was slashed to 2.5%, from 10%, while those on crude soya and sunflower oils were cut to 2.5%, from 7.5%.

In another development, after wheat, the Centre has decided to restrict the export of sugar to 10 million tonnes.

The Union Department of Food and Public Distribution said in a statement here on Tuesday the decision was in the wake of "unprecedented growth in exports of sugar" and the need to maintain sufficient stock of sugar in the country. It is for the first time in six years that the Centre is regulating sugar exports. The move will come into effect from June 1.

According to the Indian Sugar Mills Association (ISMA), the industry has signed contracts to export over 8.5 million tonnes of sugar.

Of these, around 7.1 million tonnes have been physically exported out of the country till the end of April.

In the last year, the country had exported 4.3 million lakh tonnes till April, 2021.

ತೊಗರಿ ಕಣಜಕ್ಕೆ ಭೀಮ ಬಲ

ಹೊಸ ತಳಿಯಿಂದ 1-2 ಕ್ವಿಂಟಾಲ್ ಅಧಿಕ ಇಳುವರಿ | ಹತ್ತು ದಿನಗಳ ಮೊದಲೇ ಕಟಾವಿಗೆ ಸಿದ್ಧ | ನೆಟೆರೋಗ ನಿರೋಧಕ ಶಕ್ತಿ ಅಧಿಕ

■ **ದೇವಯ್ಯ ಗುತ್ತೇದಾರ್** ಕಲಬುರಗಿ
devayya.guttedar@timesgroup.com

ಅಧಿಕ ಇಳುವರಿ ನೀಡುವ ಮತ್ತು ನೆಟೆರೋಗ ನಿರೋಧಕ ಶಕ್ತಿ ಹೊಂದಿರುವ 'ಭೀಮಾ' ಎಂಬ ಹೊಸ ತಳಿಯನ್ನು ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ಶೋಧಿಸಿದ್ದಾರೆ.

ತೊಗರಿ ಕಣಜ ಕಲಬುರಗಿಗೆ ಇದು ಇನ್ನಷ್ಟು ಬಲ ನೀಡಲಿದೆ.ಇದರ ಹೆಸರು ಜಿಆರ್‌ಜಿ-152. ಇಲ್ಲಿ ಭೀಮಾ ನದಿ ಹರಿಯುತ್ತಿರುವುದರಿಂದ ಈ ತಳಿಗೆ 'ಭೀಮಾ' ಎಂಬ ಹೆಸರು ಇಡಲಾಗಿದೆ. ಹಾಲಿ ಇರುವ ತಳಿಗೆ ಹೋಲಿಸಿದರೆ ಇದು ಹತ್ತು ದಿನಗಳ ಮುಂಚಿತವಾಗಿಯೇ ಕಟಾವಿಗೆ ಬರುತ್ತದೆ ಮತ್ತು 1ರಿಂದ 2 ಕ್ವಿಂಟಾಲ್ ಅಧಿಕ ಇಳುವರಿ ನೀಡಲಿದೆ.

ತಳಿ ವಿಶೇಷ: ರಾಯಚೂರು ಕೃಷಿ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಕಲಬುರಗಿ ವಲಯ ಕೃಷಿ ಸಂಶೋಧನಾ ಕೇಂದ್ರದ ಸಸ್ಯ ತಳಿ ವಿಜ್ಞಾನಿ ಡಾ. ಎಸ್. ಮುನಿಸ್ವಾಮಿ 'ಭೀಮಾ' ಅಭಿವೃದಿಪಡಿಸಿದ್ದಾರೆ. ಈಗ ಮಾರುಕಟ್ಟೆಯಲ್ಲಿ ಲಭ್ಯ ಇರುವ ತಳಿಗಳು 160-165 ದಿನಗಳಲ್ಲಿ ಕಟಾವಿಗೆ ಬಂದರೆ, 'ಭೀಮಾ' 155 ದಿನಗಳಲ್ಲೇ ಕಟಾವಿಗೆ ಬರುತ್ತದೆ.ಹೆಚ್ಚು ಮಳೆ ಬಂದು ನೀರು ನಿಂತರೂ ತೊಗರಿ ಗಿಡ ನೆಟೆ ಹೊಡೆದು ಒಣಗುವುದಿಲ್ಲ. ಮಳೆ ಆಶ್ರಿತ ಭೂಮಿಯಲ್ಲಿ 'ಭೀಮಾ'ದಿಂದ ಎಕರೆಗೆ 5-6 ಕ್ವಿಂಟಾಲ್ ತೊಗರಿ ಇಳುವರಿ ಪಡೆಯ ಬಹುದು. ಆದರೆ ಹಾಲಿ ತಳಿಗಳು ಕೇವಲ 4-5 ಕ್ವಿಂಟಾಲ್ ಮಾತ್ರ ಇಳುವರಿ ನೀಡುತ್ತವೆ. ನೀರಾವರಿಯಲ್ಲಿ ಭೀಮಾದಿಂದ 7-8 ಕ್ವಿಂಟಾಲ್ ಇಳುವರಿ ಪಡೆಯಬಹುದು.





ಭೀಮಾ ತೊಗರಿ ಬೀಜದ ಬಗ್ಗೆ ವಿವರಿಸುತ್ತಿರುವ ಹಿರಿಯ ವಿಜ್ಞಾನಿ ಡಾ.ಮುನಿಸ್ವಾಮಿ

ಕಲಬುರಗಿಯ ಹೊಲವೊಂದರಲ್ಲಿ ಹೊಸ ತೊಗರಿ ತಳಿ ಭೀಮಾ ಹುಲುಸಾಗಿ ಬೆಳೆದಿರುವುದು.

ಬಿತ್ತನೆ ಹೇಗೆ?: ಕೆಂಪು ಬಣ್ಣದ ಈ ತಳಿಯ ಬೀಜಗಳನ್ನು ಸಾಲಿನಿಂದ ಸಾಲಿಗೆ 4 ಫೀಟ್ ಮತ್ತು ಗಿಡದಿಂದ ಗಿಡಕ್ಕೆ 1 ಅಡಿ ಅಂತರದಲ್ಲಿ ಬಿತ್ತನೆ ಮಾಡಿದರೆ ಭರಪೂರ ಇಳುವರಿ ಪಡೆಯಬಹುದು. ಎಕರೆ ಭೂಮಿಯಲ್ಲಿ ಬಿತ್ತನೆ ಮಾಡಲು 4 ಕೆ.ಜಿ ಬೀಜಗಳು ಬೇಕಾಗುತ್ತವೆ. ಇಲ್ಲಿನ ಕೃಷಿ ಸಂಶೋಧನಾ ಕೇಂದ್ರದಲ್ಲಿ ಮೂಲ ಬೀಜಗಳ ಲಭ್ಯತೆ ಇದೆ. ಜುಲೈ ಮೊದಲ ವಾರ ಬಿತ್ತನೆ ಮಾಡಬೇಕು. ಬಿತ್ತನೆಗೂ ಮುನ್ನ ಬೀಜೋಪಚಾರ ಮಾಡಬೇಕು. ಈ ತಳಿಯ ತೊಗರಿ ಗಿಡಗಳು ಬೆಳೆದ 50-55 ದಿನಗಳಲ್ಲಿ ಕುಡಿ ಚಿವುಟ ಬೇಕು, ಪಲ್ಸ್ ಮ್ಯಾಜಿಕ್ ನಂತಹ ಪೋಷಕಾಂಶ ಬಳಸಿದರೆ ಗರಿಷ್ಠ ಇಳುವರಿ ಬರುತ್ತದೆ ಎನ್ನುತ್ತಾರೆ ಕೃಷಿ ವಿಜ್ಞಾನಿ ಡಾ. ಮುನಿಸ್ವಾಮಿ.

ಹೊಸದಾಗಿ ಶೋಧಿಸಿರುವ ಜಿಆರ್‌ಜಿ-152 ಭೀಮಾ ತಳಿ ಈಗಿರುವ ತಳಿಗಿಂತ ಹೆಚ್ಚು ಇಳುವರಿ ನೀಡುತ್ತದೆ. ಮುಖ್ಯವಾಗಿ ನೆಟೆರೋಗ ನಿರೋಧಕ ಶಕ್ತಿ ಹೊಂದಿದ್ದು, ತೊಗರಿ ಬೆಳೆಗಾರರಿಗೆ ಹೆಚ್ಚು ಆದಾಯ ನೀಡಲಿದೆ.

-ಡಾ. ಮುನಿಸ್ವಾಮಿ, ಸಸ್ಯ ತಳಿ ವರ್ಧನೆಯ ಹಿರಿಯ ವಿಜ್ಞಾನಿ, ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ

ಕೋಕೋ ಬೆಳೆ ವೀಕ್ಷಿಸಿದ ಕಲ್ಯಾಣ ಕರ್ನಾಟಕ ರೈತರು

ಮನೋಹರ ಮಸ್ಕಿ, ಸಂಸದ ಸಂಗಣ್ಣ ಕರಡಿ ಇತರರ ಉಪಸ್ಥಿತಿ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ ಭತ್ತ ಮತ್ತು ಕಬ್ಬು ಬೆಳೆಗೆ ಪರ್ಯಾಯ ಹುಡುಕುತ್ತಿರುವ ಕಲ್ಯಾಣ ಕರ್ನಾಟಕದ ಜನಪ್ರತಿನಿಧಿಗಳು ಮತ್ತು ರೈತರ ತಂಡ ಆಂಧ್ರಪ್ರದೇಶದ ತನುಕು ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿನ ಕೋಕೋ ಏಕಬೆಳೆ ಪ್ರಯೋಗವನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡಿತು.

ಫಾರ್ಮ್ ಟೀವಿನಿರ್ದೇಶಿತಈಪ್ರವಾಸದಲ್ಲಿ ಕೊಪ್ಪಳ ಸಂಸದ ಸಂಗಣ್ಣ ಕರಡಿ, ಗಂಗಾವತಿ ಶಾಸಕ ಪರಣ್ಣಮುನವಳ್ಳಿ, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಹಾಗೂ 50ಕ್ಕೂ ಹೆಚ್ಚು ಪ್ರಗತಿಪರ ರೈತರು ಪಾಲ್ಗೊಂಡಿದ್ದರು. ಸು.ಕೋ.ಬ್ಯಾಂಕ್ ಪ್ರಾಯೋಜಿತ ಈ ಪ್ರವಾಸದ ನೇತೃತ್ವವನ್ನು ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ, ಮಾಜಿ ಎಂಎಲ್ಸಿ ಮನೋಹರ ಮಸ್ಕಿ ವಹಿಸಿದ್ದರು.

ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭತ್ತ ಬೆಳೆಯುತ್ತಿರುವ ಕಾರಣಯಥೇಚ್ಛನೀರುಮತ್ತು ರಸಗೊಬ್ಬರಗಳ ಬಳಕೆಯಿಂದ ಮಣ್ಣು ಸವುಳು-ಜವಳಾಗಿ ಬಂಜರಾಗಿದೆ. ಇದರಿಂದ ಭತ್ತ ಮತ್ತು ಕಬ್ಬು ಬೆಳೆಯಿಂದ ಸಿಗುತ್ತಿದ್ದ ಲಾಭ ಕುಸಿಯುತ್ತಿದೆ. ಹೀಗಾಗಿ ಅನಿವಾರ್ಯವಾಗಿ ಈ ಭಾಗದ ರೈತರು ಪರ್ಯಾಯ ವಾಣಿಜ್ಯ ಬೆಳೆಗಾಗಿ ಹುಡುಕಾಡುತ್ತಿದ್ದಾರೆ.

ಈ ನಡುವೆ, ಕೃಷಿ ಕಾರ್ಯಕ್ರಮಗಳಿಗೆ ಮೀಸಲಾದ ಒಟಿಟಿ ಫಾರ್ಮ್ ಟೀವಿ ಆಂಧ್ರದ ರೈತರು ತೆರೆದ ಜಾಗದಲ್ಲಿ ಪೂರ್ತಿ ಬಿಸಿಲಲ್ಲಿ ಯಶಸ್ವಿಯಾಗಿ ಕೋಕೋ ಬೆಳೆಸಿರುವ ಕುರಿತು ಪ್ರಸಾರ ಮಾಡಿದ್ದು, ಇದರಿಂದ ಪ್ರೇರಿತರಾದ ಮನೋಹರಮಸ್ಕಿ ಅವರು ತುಂಗಭದ್ರಾ ನೀರಾವರಿ ಪ್ರದೇಶದಲ್ಲೂ ಈ ಪ್ರಯೋಗಕ್ಕೆ ಸು.ಕೋ. ಬ್ಯಾಂಕ್ ಮತಿಯಿಂದ ಮುಂದಾಗಿದ್ದಾರೆ. ಸಾಕಷ್ಟು ನೀರಿದ್ದರೆ ಅಡಕೆ-ತೆಂಗು-ತಾಳೆ ತೋಟಗಳಲ್ಲಿ ಅಥವಾ ತೆರೆದ ಜಾಗದಲ್ಲಿ ಕೋಕೋ ಬೆಳೆಸಿ ಎಕರೆಗೆ ₹1 ರಿಂದ 2 ಲಕ್ಷ ಆದಾಯಗಳಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಫಾರ್ಮ್ ಟೀವಿ ಅಥವಾ 9980534320 ಸಂಪರ್ಕಿಸಬಹುದು.

For more information visit
University Library Website
Web - uasbagrilibindia.org
E-mail- librarian@uasbangalore.edu.in

ಮಣ್ಣು ಪರೀಕ್ಷೆಯ ಮಹತ್ವ



ಒಬ್ಬರ ಕೃಷಿ ಭೂಮಿಯಿಂದ ಮತ್ತೊಬ್ಬರ ಭೂಮಿ ಗುಣಲಕ್ಷಣದಲ್ಲಿ ಅಜಗಜಾಂತರವಿರುತ್ತದೆ. ಅಲ್ಲಿರುವ ಮಣ್ಣು, ನೀರು, ಹವಾಮಾನ, ಗೊಬ್ಬರ ನಿರ್ವಹಣೆ ಹಾಗೂ ನೀರುಣಿಸುವ ಪದ್ದತಿ ಬೇರೆ ಬೇರೆಯಾಗಿರುತ್ತವೆ. ಈ ವ್ಯತ್ಯಾಸವನ್ನು ಪ್ರತಿಯೊಬ್ಬ ರೈತರು ಮನದಟ್ಟಾಗುವಂತೆ ತಿಳಿದುಕೊಳ್ಳುವ ಉದ್ದೇಶವೆ ಮಣ್ಣು ಪರೀಕ್ಷೆಯಾಗಿದೆ.

ಭೂಮಿಯ ಮೇಲೆ ನಿರಂತರವಾಗಿ ಹಲವಾರು ಬೆಳೆಗಳನ್ನು ಬೆಳೆಯುವುದರಿಂದ ಬೆಳೆಯ ಅವಧಿಯ ಕಾಲದಲ್ಲಿ ಕೈಗೊಂಡ ಕೃಷಿ ಚಟುವಟಿಕೆಗಳಿಂದ ಭೂಮಿಯ ಮೇಲ್ಪದರು ಗಟ್ಟಿಯಾಗಿ ಭೂಮಿಯ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಕ್ರಿಯೆಗಳಲ್ಲಿ ವ್ಯತ್ಯಾಸವಾಗಿಮಣ್ಣಿನಫಲವತ್ತತೆಕಡಿಮೆಯಾಗುತ್ತದೆ. ಆದ್ದರಿಂದ ಭೂಮಿಯ ತಯಾರಿಕೆಯ ಮೊದಲ ಹೆಜ್ಜೆಯೆ ಮಣ್ಣು ಪರೀಕ್ಷೆಯಾಗಿದೆ. ಮಾಗಿ ಉಳುಮೆಯನ್ನು ಮಾಡುವುದಕ್ಕಿಂತ ಮೊದಲು ಅಂದರೆ ಬೇಸಿಗೆಯ ಪೈರು ಕಟಾವಾದ ನಂತರ ಮಣ್ಣು ಮಾದರಿಯನ್ನು ತೆಗೆದು ಪರೀಕ್ಷೆ ಮಾಡಿಸುವುದು ತುಂಬಾ ಸೂಕ್ತ.

ಮಣ್ಣಿನ ಮಾದರಿ ತೆಗೆಯುವ ವಿಧಾನ

ಜಮೀನಿನಲ್ಲಿರುವ ನೆರಳಿನಲ್ಲಿರುವ, ತೇವಾಂಶವಿರುವ, ಬದುವಿನ ದಡದಲ್ಲಿರುವ, ಗೊಬ್ಬರಗಳನ್ನು ಉಪಯೋಗಿಸಿದ ಸ್ಥಳಗಳಿಂದ, ಸಾಗುವಳಿ ಮಾಡಿರದ ಹಾಗೂ ಮೇಲ್ಪದರಿನಲ್ಲಿರುವ ಮಣ್ಣನ್ನು ಪರೀಕ್ಷೆಗೆ ಉಪಯೋಗಿಸಬಾರದು. ಭೂಮಿಯ ಇಳಿಜಾರು, ಭೂಮಿಯ ಬಣ್ಣ, ಸವುಳು-ಜವುಳು, ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಪರೀಕ್ಷೆ ಮಾಡಿಸಬೇಕಾದ ಜಮೀನಿನ ಕ್ಷೇತ್ರವು ವಿಸ್ತಾರವಾಗಿದ್ದಲ್ಲಿ ಭೂ ಭಾಗಗಳನ್ನು ಬೇರೆ ಬೇರೆ ಉಪಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಉಪಭಾಗಗಳಿಂದ ಬೇರೆ ಬೇರೆಯಾಗಿ ಮಣ್ಣಿನ ಮಾದರಿಗಳನ್ನು ತೆಗೆಯಬೇಕು.

ಪ್ರತಿಯೊಂದು ಉಪಭಾಗಗಳಲ್ಲಿ ಸುಮಾರು 8-10 ಸ್ಥಳಗಳಲ್ಲಿ "ಗಿ" ಆಕಾರದಂತೆ 15-20 ಅಥವಾ 30 ಸೆ.ಮಿ.ವರೆಗೆ ನೆಲವನ್ನು ಅಗೆದು ಅಲ್ಲಿ ಲಭ್ಯವಾದ ಮಣ್ಣನ್ನು ತೆಗೆದು ಹೊರಚೆಲ್ಲಬೇಕು. ನಂತರ ಈ "ಗಿ" ಆಕಾರದ ಒಂದು ಬದಿಯಿಂದ ಮೇಲಿನಿಂದ ಕೆಳಗಿನವರೆಗೆ ಬರುವ ಹಾಗೆ ಸುಮಾರು 1 ಇಂಚು ದಪ್ಪವಾದಭಾಗದಮಣ್ಣನ್ನು ತೆಗೆದುಸಂಗ್ರಹಿಸಬೇಕು. ಹೀಗೆ ಸಂಗ್ರಹಿಸಿದ ಮಣ್ಣನ್ನು ಒಂದು ಅಗಲವಾದ ಪ್ಲಾಸ್ಟಿಕ್ ಹಾಳೆಯ ಮೇಲೆ ಹರಡಬೇಕು. ಅದರಲ್ಲಿರುವ ಎಲ್ಲ ಕಸ-ಕಡ್ಡಿ, ಕಲ್ಲು ಹಾಗೂ ಹರಳುಗಳನ್ನು ಆರಿಸಿ ತೆಗೆದು ಕೇವಲ ಮಣ್ಣು ಮಾತ್ರ ಉಳಿಯುವಂತೆ ಸ್ವಚ್ಛಗೊಳಿಸಬೇಕು.

ಸ್ವಚ್ಛಗೊಳಿಸಿದ ಮಣ್ಣನ್ನು ಚೆನ್ನಾಗಿ ಮಿಶ್ರಣ ಮಾಡಿ ಫಾಲಿಥಿನ್ ಹಾಳೆಯ ಮೇಲೆ ಹರಡಬೇಕು. ಇದರಲ್ಲಿ ಅಡ್ಡಲಾಗಿ (+) ಎರಡು ಗೆರೆಗಳನ್ನು ಹಾಕಿ ಸಮನಾದ ನಾಲ್ಕು ಭಾಗಗಳನ್ನಾಗಿ ಮಾಡಬೇಕು. ನಂತರ ಎದುರು ಬದುರು ಇರುವ ಎರಡು ಭಾಗಗಳನ್ನು ಹೊರಚೆಲ್ಲಬೇಕು ಹಾಗೂ ಉಳಿದ ಎರಡು ಭಾಗಗಳನ್ನು ಮತ್ತೆ ಚೆನ್ನಾಗಿ ಮಿಶ್ರಣ ಮಾಡಿ ಮೇಲೆ ತಿಳಿಸಿದ ಹಾಗೆ ಹರಡಬೇಕು. ಇದೇ ರೀತಿ ಮಾಡುತ್ತಾ ಹೋಗಿ ಸುಮಾರು 0.5 ರಿಂದ 1.0 ಕಿ.ಗ್ರಾಂ ಮಣ್ಣು ಉಳಿಯುವವರೆಗೆ ಮಾಡಬೇಕು.

ಕೊನೆಗೆ ಉಳಿದ ಮಣ್ಣನ್ನು ಪಾಲಿಥಿನ್ ಚೀಲ ಅಥವಾ ಹೊಸ ಬಟ್ಟೆಯ ಚೀಲದಲ್ಲಿ ಹಾಕಬೇಕು. ಮಣ್ಣನ್ನು ಶೇಖರಿಸಿಡಲು ಬೀಜದ ಮತ್ತು ಗೊಬ್ಬರದ ಚೀಲ ಇತ್ಯಾದಿಗಳನ್ನು ಉಪಯೋಗಿಸ ಬಾರದು.

ಮಣ್ಣಿನ ಮಾದರಿ ಶೇಖರಣೆಯಾದ ನಂತರ ಲೇಬಲ್ ಮಾಡಬೇಕು. ಇದರಲ್ಲಿ ರೈತನ ಹೆಸರು, ವಿಳಾಸ, ಮೊಬೈಲ್ ನಂಬರ್, ಸರ್ವೆ ನಂಬರ್, ಮಣ್ಣು ಸಂಗ್ರಹಿಸಿದ ದಿನಾಂಕ, ಹಿಂದಿನ ವರ್ಷ ಬೆಳೆದ ಬೆಳೆ, ನಂತರ ಬೆಳೆಯಬಹುದಾದ ಬೆಳೆ, ಹಿಂದಿನ ವರ್ಷ ಜಮೀನಿಗೆ ಗೊಬ್ಬರ ಹಾಕಿದ ದಿನಾಂಕವಾರು ವಿವರ ಸೇರಿದಂತೆ ಅವಶ್ಯವಿರುವ ಮಾಹಿತಿಗಳನ್ನು ಬರೆದು ಮಣ್ಣಿನ ಚೀಲದ ಒಳಗಡೆ ಹಾಕಿ ಭದ್ರಪಡಿಸಬೇಕು. ಮತ್ತು ಇನ್ನೊಂದು ಲೇಬಲ್‌ನ್ನು ಚೀಲದ ಮೇಲೆ ಕಟ್ಟಿ, ಮಣ್ಣು ಪರೀಕ್ಷಾ ಪ್ರಯೋಗಾಲಯಕ್ಕೆ ಕಳುಹಿಸಬೇಕು.

ಮಣ್ಣು ಪರೀಕ್ಷೆಯ ಆಧಾರಿತ ಪೋಷಕಾಂಶಗಳ ಬಳಕೆಯಿಂದ ಅಧಿಕ ಇಳುವರಿ ಪಡೆಯಬಹುದು ಹಾಗೂ ಭೂಮಿಯ ಫಲವತ್ತತೆಯನ್ನು ಬಹು ವರ್ಷಗಳವರೆಗೆ ಕಾಪಾಡಿಕೊಳ್ಳಬಹುದು ಮತ್ತು ಫಲವತ್ತತೆಯ ಅಸಮತೋಲನವನ್ನು ನಿವಾರಿಸಬಹುದು.

■ ಬಸವರಾಜ ಗಿರಗಾಂವಿ
ಅಸಿಸ್ಟಂಟ್ ಜನರಲ್ ಮ್ಯಾನೇಜರ್-ಕೃಷಿ ವಿಭಾಗ
ಜಮಖಂಡಿ ಸಕ್ಕರೆ ಕಾರ್ಖಾನೆ ನಿ. ಹಿರೇಪಡಸಲಗಿ
ಮೊಬೈಲ್-9980524410

